**ಹಿರಿಯ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ತಿ. ನರಸೀಪುರ**

**ಎಂ.ವಿ.ಸಿ. ಸಂಖ್ಯೆ 1211/2018**

ಆರ್.ಡಬ್ಲ್ಯೂ-2

| | | |
|---|---|---|
| ಹೆಸರು | : | ಆನಂದ ಎನ್ |
| ಗಂಡನ ಹೆಸರು | : | ಲೇಟ್ ನಾಗರಾಜ್ ನಾಯಕ |
| ವಯಸ್ಸು | : | 43 |
| ವೃತ್ತಿ | : | ಪೊಲೀಸ್ ನಿರೀಕ್ಷಕರು, ಚಿಕ್ಕಜಾಲ ಪೊಲೀಸ್ ಠಾಣೆ, ಬೆಂಗಳೂರು |
| ವಾಸ | : | ಬೆಂಗಳೂರು |

**ದಿನಾಂಕ 20.09.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ : ಸ್ವಯಂ**

ದಿನಾಂಕ 26.12.2016 ರಿಂದ 05.08.2018 ರವರೆಗೆ ತಿ. ನರಸೀಪುರ ಪೊಲೀಸ್ ಠಾಣೆಯಲ್ಲಿ ಕಾನೂನು ಮತ್ತು ಸುವ್ಯವಸ್ಥೆಯ ಪೊಲೀಸ್ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ತಿ. ನರಸೀಪುರ ಪೊಲೀಸ್ ಠಾಣಾ ಅಪರಾಧ ಸಂಖ್ಯೆ 341/2016 ರಲ್ಲಿ ದಿನಾಂಕ 25.01.2017 ರಂದು ಮೋಟಾರ್ ವಾಹನ ಅಪಘಾತ ವರದಿ ಮತ್ತು ದಿನಾಂಕ 02.05.2017 ರಂದು ಗಾಯದ ಪ್ರಮಾಣ ಪತ್ರವನ್ನು ಪೊಲೀಸ್ ಸಿಬ್ಬಂದಿಯ ಮೂಲಕ ಬಂದ ಟಪಾಲಿನಿಂದ ಪಡೆದು ಕಡತಕ್ಕೆ ಅಳವಡಿಸಲು ಆ ಪ್ರಕರಣದ ತನಿಖಾಧಿಕಾರಿಯಾಗಿದ್ದ ಸಹಾಯಕ ಪೊಲೀಸ್ ಉಪ ನಿರೀಕ್ಷಕರಾಗಿದ್ದ ದೊಡ್ಡೇಗೌಡರವರಿಗೆ ನೀಡಿರುತ್ತೇನೆ.

**ಪಾಟೀ ಸವಾಲು : ಶ್ರೀ ಜಿ.ಕೆ.ಪಿ. 2ನೇ ಎದುರುದಾರರ ಪರ ವಕೀಲರಿಂದ:**

ತಿ. ನರಸೀಪುರ ಪೊಲೀಸ್ ಠಾಣೆಯ ಅಪರಾಧ ಸಂಖ್ಯೆ 341/2016ರ ದೋಷಾರೋಪಣಾ ಪಟ್ಟಿಯ ದೃಢೀಕೃತ ಪ್ರತಿಯನ್ನು ಸಾಕ್ಷಿಗೆ ತೋರಿಸಿ ಅದನ್ನು ಸದರಿ ತಿ. ನರಸೀಪುರ ಪೊಲೀಸ್ ಠಾಣೆಯಿಂದ ನೀಡಲಾಗಿದೆ ಎಂದರೆ, ಅದರಲ್ಲಿ ಇರುವ ಸಹಿ ಯಾರದು ಎಂದು ನನಗೆ ಗೊತ್ತಿಲ್ಲ ಮತ್ತು ಆ ದಾಖಲೆಯ ನೈಜತೆಯ ಬಗ್ಗೆ ಪೂರಕ ದಾಖಲೆ ಇರುವುದಿಲ್ಲ. ಆ ದಾಖಲೆಯಲ್ಲಿ ನನ್ನ ಹೆಸರು ತನಿಖಾಧಿಕಾರಿ ಎಂದು ನಮೂದಾಗಿದೆ ಎಂದರೆ ನನಗೆ ಗೊತ್ತಿಲ್ಲ, ಆ ದಾಖಲೆಯು ನ್ಯಾಯಾಲಯಕ್ಕೆ ಸಲ್ಲಿಸಿರುವ ದೋಷಾರೋಪಣಾ ಪಟ್ಟಿಯಾಗಿರುವುದಿಲ್ಲ. ಆ ದಾಖಲೆಯಲ್ಲಿ ತನಿಖಾಧಿಕಾರಿಯ ಪದನಾಮದ ಮೇಲೆ ನನ್ನ ಹೆಸರು ಬೆರಳಚ್ಚುಗೊಂಡಿದೆ ಎಂದರೆ ನನಗೆ ಗೊತ್ತಿಲ್ಲ.

ಒಂದು ಅಪರಾಧ ಪ್ರಕರಣದಲ್ಲಿ ಒಂದೇ ದೋಷಾರೋಪಣಾ ಪಟ್ಟಿ ಯಲ್ಲಿ ಸಲ್ಲಿಸಲಾಗುತ್ತದೆ ಎಂದರೆ ಸರಿ. ನ್ಯಾಯಾಲಯಕ್ಕೆ ಸಲ್ಲಿಸುವ ದೋಷಾರೋಪಣಾ ಪಟ್ಟಿ ಮತ್ತು ಠಾಣೆಯಲ್ಲಿ ದೃಢೀಕೃತ ಪ್ರತಿಯನ್ನು ನೀಡುವ ದೋಷಾರೋಪಣಾ ಪಟ್ಟಿ ಬೇರೆ ಬೇರೆ ಇರುತ್ತದಾ ಎಂದರೆ ಬೇರೆ ಬೇರೆ ಇರುವುದಿಲ್ಲ.

ದಿನಾಂಕ 02.05.2017 ರಂದು ನಾನು ತಿ. ನರಸೀಪುರ ಪೊಲೀಸ್ ಠಾಣೆಯಲ್ಲಿ ಕರ್ತವ್ಯದಲ್ಲಿದ್ದೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸುವ ವೇಳೆಗೆ ನಾನು ಆ ಠಾಣೆಯಲ್ಲಿ ಕರ್ತವ್ಯದಲ್ಲಿದ್ದೆ. ಸದರಿ ದೊಡ್ಡೇಗೌಡರವರು ನನ್ನ ಅಧೀನ ಅಧಿಕಾರಿಯಾಗಿದ್ದರು ಎಂದರೆ ಸರಿ. ಅವರು

ನನ್ನ ಅಧೀನ ಅಧಿಕಾರಿಯಾಗಿದ್ದರಿಂದ ಅವರು ತನಿಖೆ ಮಾಡಿ ಒಂದು ಪ್ರಕರಣದಲ್ಲಿ ದೋಷಾರೋಪಣಾ ಪಟ್ಟಿ ಸಲ್ಲಿಸುವ ಪೂರ್ವದಲ್ಲಿ ನನ್ನ ಗಮನಕ್ಕೆ ತರುತ್ತಿದ್ದರು ಎಂದರೆ ಸರಿಯಲ್ಲ, ಅವರು ತನಿಖೆಯನ್ನು ಮಾಡಿ ದೋಷಾರೋಪಣಾ ಪಟ್ಟಿ ಸಲ್ಲಿಸಲು ಸ್ವತಂತ್ರರಾಗಿದ್ದರು.

ನಿಪಿ.5 ರ ಎಂವಿಐ ವರದಿಯಲ್ಲಿ ಮತ್ತು ನಿಪಿ.7ರ ಗಾಯದ ಪ್ರಮಾಣ ಪತ್ರದಲ್ಲಿ ನನ್ನ ಸಹಿಗಳು ಸ್ವೀಕೃತಿದಾರನಾಗಿ ಇದೆ ಎಂದರೆ ಸರಿ. ಆ ದಾಖಲೆಗಳನ್ನು ನಮ್ಮ ಪೊಲೀಸ್ ಸಿಬ್ಬಂದಿಗಳು ಮುದ್ದಾಂ ತಂದಿದ್ದರು. ಆ ದಾಖಲೆಗಳನ್ನು ತನಿಖಾಧಿಕಾರಿಯಾದ ಸದರಿ ದೊಡ್ಡೇಗೌಡರವರಿಗೆ ನೀಡಿ ಎಂದು ಪೊಲೀಸ್ ಸಿಬ್ಬಂದಿಗಳಿಗೆ ನಾನು ಹೇಳಿಲ್ಲವಾ ಎಂದರೆ ದಾಖಲೆಗಳು ಟಪಾಲು ಮೂಲಕ ಬಂದಾಗ ಠಾಣೆಯ ಪೊಲೀಸ್ ಉಪ ನಿರೀಕ್ಷಕರು ಸ್ವೀಕರಿಸಿ ಸಂಬಂಧಪಟ್ಟ ತನಿಖಾಧಿಕಾರಿಗೆ ಹಸ್ತಾಂತರ ಮಾಡುತ್ತಾರೆ.

ನಿಪಿ.8 ರ ದೋಷಾರೋಪಣಾ ಪಟ್ಟಿಯನ್ನು ನಾನು ಪರಿಶೀಲಿಸಿಲ್ಲ.

ಸಾಮಾನ್ಯವಾಗಿ ಅಪಘಾತದ ಸಂಬಂಧ ಗಾಯಾಳು ಚಿಕಿತ್ಸೆ ಪಡೆಯುವ ಆಸ್ಪತ್ರೆಯಿಂದ ಠಾಣೆಗೆ ಎಂ ಎಲ್ ಸಿ ತರಿಸಿಕೊಳ್ಳಲಾಗುತ್ತದೆ ಎಂದರೆ ಆ ಆಸ್ಪತ್ರೆಯ ವೈದ್ಯಾಧಿಕಾರಿಗಳೇ ಕಳುಹಿಸುತ್ತಾರೆ. ಗಾಯಾಳು ಪ್ರಾಥಮಿಕ ಚಿಕಿತ್ಸೆಯನ್ನು ಪಡೆದ ಮೊದಲ ಆಸ್ಪತ್ರೆಯಿಂದ ಆ ಗಾಯಾಳು ಮುಂದುವರೆದ ಚಿಕಿತ್ಸೆಯನ್ನು ಪಡೆಯುವ ಆಸ್ಪತ್ರೆಗೆ ದಾಖಲೆಗಳು ಹೋಗುತ್ತವೆ ಎಂದರೆ ಕೆಲವೊಮ್ಮೆ ಹೋಗಬಹುದು, ಕೆಲಮೊಮ್ಮೆ ಹೋಗದೆ ಇರಬಹುದು.

ನಿಪಿ.7 ರ ಗಾಯದ ಪ್ರಮಾಣ ಪತ್ರವನ್ನು ನಾನು ಸ್ವೀಕರಿಸಿದ ದಿನವೆ ಈ ಮೇಲೆ ಹೇಳಿದ ಪ್ರಕರಣದ ದೋಷಾರೋಪಣಾ ಪಟ್ಟಿ ಸಲ್ಲಿಕೆಯಾಗಿದೆ ಎಂದರೆ ಸರಿ. ಆ ದಿನ ಸದರಿ ದೊಡ್ಡೇಗೌಡರವರು ಠಾಣೆಯಲ್ಲಿ ಇದ್ದರಾ ಎಂದರೆ ಟಪಾಲನ್ನು ಸ್ವೀಕರಿಸುವಾಗ ಇರಲಿಲ್ಲ, ನಂತರ ಠಾಣೆಗೆ ಬಂದಿರುತ್ತಾರೆ.

ಸದರಿ ದೋಷಾರೋಪಣಾ ಪಟ್ಟಿಯಲ್ಲಿ ನಮೂದಿಸಿರುವ ಮೋಟಾರ್ ಸೈಕಲ್ ಅಪಘಾತದಲ್ಲಿ ಭಾಗಿಯಾಗಿಲ್ಲದೆ ಇದ್ದರೂ ಕೂಡ ಮತ್ತು ಅರ್ಜಿದಾರರು ಸ್ವತ: ತಾವೇ ಬೇರೆ ಮೋಟಾರ್ ಸೈಕಲ್‌ನಿಂದ ಬಿದಿದ್ದರೂ ಕೂಡ ಅವರಿಗೆ ಸಹಾಯ ಮಾಡಲು ನಾನು ಮತ್ತು ಸದರಿ ದೊಡ್ಡೇಗೌಡರವರು ಶಾಮೀಲಾಗಿ ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಸದರಿ ಪ್ರಕರಣದಲ್ಲಿ ತನಿಖಾಧಿಕಾರಿ ನಾನು ಆಗಿರುವುದಿಲ್ಲ.

**ಮರು ವಿಚಾರಣೆ ಇಲ್ಲ**.

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)
ಓ ಹೇ ಕೇ ಸರಿ ಇದೆ

**ಹಿರಿಯ ದಿವಾಣಿ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾದ. ತಿ.ನರಸೀಪುರ**